ಕತ್ತೆ ಮತ್ತು ಹಾಳು ಬಾವಿ

✍️ಶ್ರೀವಲ್ಲಿ ರೈ ಮಾರ್ಟೆಲ್



ಒಂದು ಕತ್ತೆ ಕತ್ತಲೆಯಲ್ಲಿ ಮೇಯುತ್ತಾ ಮೇಯುತ್ತಾ ಹೋಗಿ, ದಂಡೆಯಿಲ್ಲದ ಒಂದು ಹಾಳು ಬಾವಿಗೆ ಬಿತ್ತು. ಬಿದ್ದ ತಕ್ಷಣ ಅದು ಜೋರಾಗಿ ಅರಚಲು (ಕೂಗಲು) ತೊಡಗಿತು, ಅತ್ತಿತು. ಕತ್ತೆಯ ಕೂಗು ಕೇಳಿ ಅದರ ಯಜಮಾನ ಬಾವಿಯ ಬಳಿಗೆ ಬಂದ. ಬಾವಿ ತುಂಬಾ ಆಳವಾಗಿತ್ತು. ಹೆಣೆದ ಹಗ್ಗ ಹಾಕಿ ಕತ್ತೆಯನ್ನು ಮೇಲೆ ಎಳೆಯುವುದು ಸಾಧ್ಯವಿರಲಿಲ್ಲ. ಯಾರಾದರೂ ಆ ಹಾಳು ಬಾವಿಗೆ ಇಳಿದು ಅದರ ಹೊಟ್ಟೆಯ ಅಡಿಗೆ ದಪ್ಪನೆಯ ಕಂಬಳಿ ಅಥವಾ ಚೀಲ ಹಾಕಿ, ಹಿಂದಿನ ಕಾಲಿನ ಮುಂದೆ, ಮುಂದಿನ ಕಾಲಿನ ಹಿಂದೆ ಹೊಟ್ಟೆಯಡಿಯಲ್ಲಿ ಹಗ್ಗ ಹಾಕಿ ನಾಲ್ಕೈದು ಜನರು ಎಳೆಯಬೇಕು. ಹೀಗೆ ಯೋಚಿಸಿ, ಬೆಳಗಿನ ಜಾವ ಎದ್ದು ಊರಿನ ಜನರನ್ನು ಒಟ್ಟು ಮಾಡಲು ಹೋದ.

ಇವನ ಕತ್ತೆಯ ಕಥೆ ಕೇಳಿ ಒಬ್ಬ ಅಂದ: "ನಿನಗೇನು ಹುಚ್ಚಾ ಮಾರಾಯ, ಆ ಮುದುಕ ಕತ್ತೆಯನ್ನು ಮೇಲೆ ಎಳೆಯಲು ಹೊರಟಿದ್ದೀಯಾ? ಯಾವುದಕ್ಕೂ ಕೆಲಸಕ್ಕೆ ಬಾರದ ಆ ಕತ್ತೆಯನ್ನು ಮೇಲೆ ಎಳೆದು ಹೊಟ್ಟೆಗೆ ಅನ್ನ ಹಾಕಬೇಕಾ, ಸಾಯಲಿ. ಸತ್ತರೆ ಗುಂಡಿ ತೆಗೆದು ಮುಚ್ಚುವ ಖರ್ಚು ಬೇರೆ. ಹೇಗೂ ನಿನಗೆ ಆ ಹಾಳು ಬಾವಿಯನ್ನು ಮುಚ್ಚುವುದಿದೆ. ಇನ್ನ್ಯಾರೂ ಮನುಷ್ಯರು ಬಿದ್ದು ಸಾಯುವುದು ಬೇಡ. ಒಂದು ಕೆಲಸ ಮಾಡು, ಆ ಬಾವಿಯನ್ನು ಈಗಲೇ ಮುಚ್ಚಿಬಿಡು. ಕತ್ತೆಯನ್ನು ಹೂತಂತೆಯೂ ಆಯಿತು, ಬಾವಿ ಮುಚ್ಚಿದಂತೆಯೂ ಆಯಿತು."

ಕತ್ತೆಯ ಯಜಮಾನನಿಗೂ ಅದು ಸರಿ ಎನಿಸಿತು. ನಾಲ್ಕೈದು ಜನರು ಹಾರೆ, ಪಿಕ್ಕಾಸು, ಬುಟ್ಟಿ ಹಿಡಿದು ಬಾವಿಯ ಬಳಿಗೆ ಬಂದು ಒಳಗಡೆ ಇಣುಕಿ ನೋಡಿದರು. ಯಜಮಾನ ಹಗ್ಗ ಹಿಡಿದು ಮೇಲೆ ಎಳೆಯಲು ಜನರನ್ನು ಕರೆದುಕೊಂಡು ಬರುತ್ತಾನೆ ಎಂದು ಕಾಯುತ್ತಿದ್ದ ಕತ್ತೆಗೆ ಹಾರೆ, ಪಿಕ್ಕಾಸು, ಬುಟ್ಟಿಗಳನ್ನು ನೋಡಿ ಆಶ್ಚರ್ಯವಾಯಿತು. ಜನರು ಮಣ್ಣು ತೋರಿ ಅದರ ಮೇಲೆ ಹಾಕಿದಾಗ, "ನನ್ನನ್ನು ಜೀವಂತವಾಗಿ ಮುಚ್ಚುತ್ತಿದ್ದಾರೆ" ಎಂಬ ವಿಷಯ ಅದಕ್ಕೆ ಅರಿವಾಯಿತು.

ಕತ್ತೆ ತೀವ್ರ ಆತಂಕಕ್ಕೊಳಗಾಯಿತು. ಕೂಗಾಡಿತು, ಚಡಪಡಿಸಿತು. "ನಾನು ಈ ಮನುಷ್ಯನಿಗಾಗಿ ಎಷ್ಟೊಂದು ದುಡಿದಿದ್ದೇನೆ. ಕಷ್ಟದ ಸಮಯದಲ್ಲಿ ನಾಲ್ಕು ಹಿಡಿ ಒಣ ಹುಲ್ಲು ಹಾಕಿರುತ್ತಾನೆ. ಬಾಕಿ ಸಮಯದಲ್ಲಿ ಕಾಡಿನ ಸೊಪ್ಪು ಮೇಯ್ದು, ತೋಡಿನ ನೀರು ಕುಡಿದು, ಇವನು ಬೆನ್ನಿಗೆ ಹಾಕಿದಷ್ಟು ಹೊರೆಯನ್ನು ಹೊರುತ್ತಿದ್ದೆ. ಗಾಣಕ್ಕೆ ಕಟ್ಟಿ ದಿನವಿಡೀ ಓಡಿಸುತ್ತಿದ್ದ. ನನ್ನ ಬೆನ್ನಿನ ಮೇಲೆ ಕುಳಿತು ಊರೂರು ಸುತ್ತುತ್ತಿದ್ದ. ದೇವರೇ, ನನಗೆ ಇಂತಹ ಕಷ್ಟವನ್ನು ಏಕೆ ಕೊಟ್ಟೆ?" ಎಂದು ಗಟ್ಟಿಯಾಗಿ ಕೂಗಿಕೊಂಡಿತು. ಆದರೆ ಯಾವುದೂ ಪ್ರಯೋಜನವಾಗಲಿಲ್ಲ. ಕಣ್ಣಿನಲ್ಲಿ ರಕ್ತವಿಲ್ಲದ ಕಟುಕ ಮನುಷ್ಯರು ಮಣ್ಣು ಹಾಕುತ್ತಲೇ ಬಂದರು.
ಅರ್ಧಮುಕ್ಕಾಲು ಮಣ್ಣಿನಲ್ಲಿ ಮುಳುಗುವಾಗ ಕತ್ತೆಗೆ ಮುಂದೆ ಬರಲಿರುವ ಭಯಾನಕ ಸಾವು ಕಣ್ಣೆದುರು ಬಂದಂತೆ ಅನಿಸಿತು. "ಇನ್ನು ಮಣ್ಣಿನಲ್ಲಿ ಮುಳುಗುತ್ತೇನೆ. ಬಾಯಿಗೆ, ಗಂಟಲಿಗೆ, ಮೂಗಿಗೆ ಮಣ್ಣು ಸೇರುತ್ತದೆ. ಉಸಿರು ಕಟ್ಟುತ್ತದೆ. ಒದ್ದಾಡಿ ಒದ್ದಾಡಿ ಸಾಯಬೇಕು" ಎಂದುಕೊಂಡಿತು. ಆಗ, "ಇಲ್ಲ, ಸುಲಭವಾಗಿ ಸೋಲೊಪ್ಪಿಕೊಳ್ಳಬಾರದು. ಏನಾದರೂ ಮಾಡಬೇಕು, ಜೀವ ಇರುವವರೆಗೆ ಪ್ರಯತ್ನವನ್ನು ಬಿಡಬಾರದು" ಎಂದು ನಿಶ್ಚಯಿಸಿ, ಕತ್ತೆ ಮೈ ಕೊಡವಿ ನಿಂತು ಮಣ್ಣಿನಿಂದ ಮೇಲೆ ಬಂದಿತು. ಕಾಲುಗಳಿಂದ ಮಣ್ಣನ್ನು ಮೆಟ್ಟಿ ಸಮತಟ್ಟು ಮಾಡಿತು. ಜನರು ಮಣ್ಣು ಹಾಕುತ್ತಿದ್ದಂತೆ, ಕತ್ತೆ ಅದನ್ನು ಕಾಲುಗಳಿಂದ ತುಳಿದು ಸಮ ಮಾಡುತ್ತಾ ಮೇಲೆ ಏರುತ್ತಾ ಹೋಯಿತು. ಮಣ್ಣಿನಿಂದ ಬಾವಿ ತುಂಬುತ್ತಾ ಬಂದಂತೆ, ಕತ್ತೆಯೂ ಮಣ್ಣಿನ ಜೊತೆಗೆ ಮೇಲೆ ಮೇಲೆ ಬಂದಿತು. ಬಾವಿಯ ದಂಡೆಯ ಮಟ್ಟಕ್ಕೆ ಮಣ್ಣು ಏರಿದ ತಕ್ಷಣ, ಕತ್ತೆ ಒಂದೇ ಜಿಗಿತಕ್ಕೆ ಹೊರಗೆ ಜಿಗಿದು ಕಾಡು ಗುಡ್ಡದತ್ತ ಓಡಿಹೋಯಿತು. ಜನರೆಲ್ಲರೂ ಆಶ್ಚರ್ಯದಿಂದ ನೋಡುತ್ತಲೇ ನಿಂತುಬಿಟ್ಟರು.
'ಮನುಷ್ಯನ ಪ್ರಯತ್ನಕ್ಕೆ ದೈವದ ಬೆಂಬಲವಿದೆ' ಎಂಬ ಕನ್ನಡದ ಗಾದೆಯಂತೆ, ನಾವು ಕೊನೆಯವರೆಗೂ ಭರವಸೆ ಕಳೆದುಕೊಳ್ಳದೆ ಪ್ರಯತ್ನಿಸುತ್ತಿರಬೇಕು.